


ಪರೀಕ್ಷೆ ಬರೆದ ವಿದ್ಯಾರ್ಥಿ ನಾನು. ಶಾಲಾ ಸಿಬ್ಬಂದಿ, ಶಿಕ್ಷಕರು, ಸಹಪಾಠಿಗಳು, ಅವರ ಪಾಲಕರು ಇವರೆಲ್ಲ ನನ್ನನ್ನು ಬೆಂಬಲಿಸುತ್ತಾರೆ. ಪ್ರೋತ್ಸಾಹ ನೀಡುತ್ತಾರೆ. ಚಿತ್ರೀಕರಣದ ಸಮಯದಲ್ಲಿ ಭುವನ್, ಸಿಂಚನಾ, ಶಶಾಂಕ್ ಅವರ ಅಮ್ಮಂದಿರು ನೋಟ್ಸ್ ಕಳಿಸೋರು.

ಸಿನಿಮಾ ಮತ್ತು ರಂಗಭೂಮಿ ಎರಡರಲ್ಲಿ ರಂಗಭೂಮಿಗೆ ಹೆಚ್ಚು ತೂಕ. ರಂಗಭೂಮಿಯಲ್ಲಿದ್ದು ಸಿನಿಮಾಕ್ಕೆ ಬರೋದು ಸುಲಭ. ಸಿನಿಮಾದಲ್ಲಿ ರೀಟೇಕ್‌ಗೆ ಅವಕಾಶವಿದೆ. ಆದರೆ ರಂಗಭೂಮಿಯಲ್ಲಿ ಹಾಗಿಲ್ಲ. ನಮ್ಮ ನಟನೆಯಲ್ಲಿ ಪರಿಣತರಾಗಿರಲೇಬೇಕು.

ಎರಡೂವರೆ ತಾಸಿನ ನಾಟಕದಲ್ಲಿ ನಮ್ಮೆಲ್ಲ ಸಾಮರ್ಥ್ಯವನ್ನು ಧಾರೆಯೆರೆಯಬೇಕು. ಕೊನೆಯ ಸೀಟ್‌ನಲ್ಲಿ ಕೂತಿರೋವರಿಗೂ ಕಾಣುವಂತೆ ನಮ್ಮ ಭಾವಾಭಿನಯ ಇರಬೇಕು. ಕಣ್ಣು ಇನ್ನೂ ದೊಡ್ಡದಾಗಿರಬೇಕು. ಅಭಿವ್ಯಕ್ತಿಯೂ ಹೆಚ್ಚಿನ ಮಟ್ಟದಲ್ಲಿರಬೇಕು. ನಟನೆಯ ಮಜ, ಖುಷಿ ಸಿಗೋದು ರಂಗಭೂಮಿಯಲ್ಲೇ. ಇಲ್ಲಿ ಶಿಸ್ತು ಕೂಡ ಮುಖ್ಯ.

ತರಬೇತಿ ನಿರಂತರವಾಗಿರಬೇಕು. ನನಗೆ ಪಾಠಗಳು ನೆನಪಿಲ್ಲದಿದ್ದರೂ ನಾಟಕದ ಸಂಭಾಷಣೆಗಳನ್ನು ಮರೆಯುವುದಿಲ್ಲ. ಯಾವತ್ತೂ ಮರೆತಿಲ್ಲ.


ನಾನು ಮೈಸೂರಿನ ಜೆಎಸ್‌ಎಸ್ ಪಬ್ಲಿಕ್ ಶಾಲೆಯ 9ನೇ ತರಗತಿ ವಿದ್ಯಾರ್ಥಿ. ನನಗೆ ಏನಾದರೂ ಅವಕಾಶ ಸಿಕ್ಕರೆ ನನಗಿಂತ ದುಪ್ಪಟ್ಟು ಸಂಭ್ರಮಿಸೋರು ಕುಟುಂಬದವರೇ. ಅಪ್ಪ, ಅಮ್ಮ, ಅಜ್ಜಿ, ತಾತ, ಅಕ್ಕ ಎಲ್ಲರಿಗೂ ಖುಷಿ. ನಾನು ಅದೃಷ್ಟವಂತ. ಪ್ರೇಕ್ಷಕರ ಮೆಚ್ಚುಗೆ, ಪ್ರೋತ್ಸಾಹವೇ ನನ್ನ ಮುಂದಿನ ಸಾಧನೆಗೆ ಸ್ಫೂರ್ತಿ. ಅಮ್ಮನ ಹೊಗಳಿಕೆಗಿಂತ ಅವರ ವಿಮರ್ಶೆಗೆ ನಾನು ಹೆಚ್ಚು ಮಹತ್ವ ಕೊಡುತ್ತೇನೆ.

ಸಿನಿಮಾಕ್ಕೂ ಮೊದಲು ಬೇಸಿಗೆ ಶಿಬಿರಗಳನ್ನು ತಪ್ಪಿಸಿರಲಿಲ್ಲ. ಅಭಿನಯದಲ್ಲಿ ಕಷ್ಟ ಆಗುವುದೇ ಇಲ್ಲ. ಅಳುವ ದೃಶ್ಯದಲ್ಲಿ ಗ್ಲಿಸರಿನ್ ಹಾಕೋರು. ಅದರ ಉರಿಗೆ ಕಣ್ಣು ಉಜ್ಜೊತ್ತಿದ್ದೆ. ನಾಟಕಗಳಲ್ಲಿ ನಿಜವಾಗಿ ಅಳಬಹುದು. ಭಾವನಾತ್ಮಕವಾಗಿ ಅಭಿನಯದೊಳಗೆ ಮುಳುಗುತ್ತಿದ್ದೆ. ಆದರೆ ಚಿತ್ರೀಕರಣದಲ್ಲಿ 20 ಸೆಕೆಂಡ್‌ಗೆ ಕಟ್ ಅನ್ನೋರು. ಆಗ ನಾನು ಮೋಸ್ತಾನಿಂದ ಪರಮ್ ಆಗ್ತಿದ್ದೆ. ನನಗೆ ರಂಗಭೂಮಿಯಷ್ಟೇ ಸಿನಿಮಾ ಸಹ ಇಷ್ಟ.

'ಮೋಹನದಾಸ' ಸಿನಿಮಾಗೆ ಉತ್ತಮ ಚಿತ್ರ ವಿಭಾಗದಲ್ಲಿ 2019ರ ರಾಜ್ಯ ಪ್ರಶಸ್ತಿ ದೊರೆತಿದೆ. 'ಮೈ ವೇದಿಕೆ ಕಾಂಪಿಟೇಷನ್'ನಿಂದ ಬಹುಮುಖ ಪ್ರತಿಭೆ ಎಂದು ಪ್ರಶಸ್ತಿ ಸಿಕ್ಕಿದೆ. ನಟನೆ ಜೊತೆ ಹಾಡು ಹಾಡುತ್ತೇನೆ. ಬ್ಯಾಡ್ಮಿಂಟನ್ ವಲಯ ಹಂತದವರೆಗೂ ಆಡಿದ್ದೇನೆ. ಪ್ರತಿಭೆ ಇದ್ದಲ್ಲಿ ಅವಕಾಶ ಇದ್ದೇ ಇದೆ.

ಹಲ್ಲಿನ ಕಥೆ: 'ಮೋಹನದಾಸ' ಚಿತ್ರೀಕರಣದಲ್ಲಿ ಪರಮ್ ಮೂರನೇ ಕ್ಲಾಸ್‌ನಲ್ಲಿದ್ದ. ಆ ಸಮಯದಲ್ಲಿ ಮುಂದಿನ ಹಲ್ಲು ಬಿದ್ದು ಹೋಗಿತ್ತು. ಅದಕ್ಕೆ ತಾತ್ಕಾಲಿಕ ಸಿಮೆಂಟ್ ಹಲ್ಲು ಹಾಕಿಸ್ಕೊಂಡು ಹೋಗಿದ್ವಿ. ಎಷ್ಟೋ ಬಾರಿ ಬೆಳಿಗ್ಗೆ ಎದ್ದಾಗ ಹಾಸಿಗೆಯಲ್ಲಿ ಹಲ್ಲು ಬಿದ್ದಿರೋದು. ಮತ್ತೆ ವೈದ್ಯರ ಹತ್ರ ಹೋಗೋದು...' ಪರಮ್ ಅಮ್ಮ ದೀಪಾ ರವಿಶಂಕರ್ ಹೇಳುತ್ತಿದ್ದರೆ, ಅದಕ್ಕೆ ದನಿಗೂಡಿಸಿದ ಪರಮ್, 'ನಾನು ಕ್ಯಾವಿಟಿಗಾಗಿ ಡೆಂಟಿಸ್ಟ್ ಕಡೆ ಹೋಗಿದ್ದೇ ಇಲ್ಲ. ಈ ಹಲ್ಲಿಗಾಗಿ ಹೋಗ್ಬೇಕಾಯ್ತು' ಎಂದು ಚಟಾಕಿ ಹಾರಿಸಿದ.


ಸಂಧಿಲಿನ್
SANDHILIN सन्धिलिन



ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ ಹೇಳಿ!




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM™ AYURVEDA PHARMACY

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಉಡುಪಿ–574 118, ಕರ್ನಾಟಕ.
Customer Care: +91 89709 77513
Email: sdmaph@sdmayurvedacollegeudupi.in
https://sdmayupharmacy.com
ISO 9001:22000 & GMP CERTIFIED
U.I.N:KA/044/2021